

بِسْمِ اللهِ الرَّحْمَنِ الرَّحِيمِ

# ಶುದ್ಧ ಹೃದಯದೊಂದಿಗೆ ಸತ್ಯಾನ್ವೇಷಣೆ ನಡೆಸುವವರಿಗೆ ಅಲ್ಲಾಹನು ಸತ್ಯಮಾರ್ಗ ತೋರಿಸಿಕೊಡುತ್ತಾನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **06–10–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಹ್ಮದಿಯ್ಯತನ್ನು ಸ್ವೀಕರಿಸಿದವರ ಬಗ್ಗೆ ವಿಶ್ವಾಸವರ್ಧಕ ಘಟನೆಗಳನ್ನು ನಾನು ಕೆಲವು ಸಂದರ್ಭಗಳಲ್ಲಿ ಪ್ರಸ್ತಾಪಿಸುತ್ತಾ ಇರುತ್ತೇನೆ. ಹಲವು ಜನರು ನನಗೆ ಬರೆದು ತಿಳಿಸುತ್ತಾರೆ: ಇಂತಹ ಘಟನೆಗಳನ್ನು ಪ್ರಸ್ತಾಪಿಸುತ್ತಾ ಇರಬೇಕು. ಅವುಗಳು ಆಸಕ್ತಿದಾಯಕವಾಗಿವೆ ಮಾತ್ರವಲ್ಲ ಅವು ನಮ್ಮ ಮಕ್ಕಳ ಶ್ರದ್ಧೆಯನ್ನು ಸಹ ಅವುಗಳ ಕಡೆಗೆ ಆಕರ್ಷಿಸುತ್ತವೆ. ಯುವಜನರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸ್ಥಿತಿ ಉತ್ತಮಗೊಳ್ಳುವಂತೆ ಅವು ಮಾಡುತ್ತವೆ. ನಮ್ಮ ಸ್ಥಿತಿಯು ಸಹ ಉತ್ತಮಗೊಳ್ಳುವಂತೆ ಮಾಡುತ್ತವೆ. ಜನ್ಮತಃ ಅಹ್ಮದಿಯಾಗಿರುವ ಕೆಲವರು ನನಗೆ ಬರೆಯುತ್ತಾರೆ: ಹೊಸದಾಗಿ ಅಹ್ಮದಿಯ್ಯತ್‌ಗೆ ಪ್ರವೇಶಿಸುವವರ ಈ ಸ್ಥಿತಿ ಮತ್ತು ಅವರು ಅಲ್ಲಾಹನೊಂದಿಗೆ ಹೊಂದಿರುವ ಸಾಮೀಪ್ಯ, ನಮ್ಮನ್ನು ನಾಚಿಕೆಪಡುವಂತೆ ಮಾಡುತ್ತದೆ ಮತ್ತು ನಾವು ಸಹ ವಿಶ್ವಾಸದಲ್ಲಿ ವರ್ಧಿಸಲು ಪ್ರಯತ್ನ ಮಾಡಬೇಕಾದುದರ ಬಗ್ಗೆ ನಮ್ಮ ಗಮನವನ್ನು ಹರಿಸುತ್ತದೆ. ಹೊಸದಾಗಿ ಬೈಅತ್ ಮಾಡಿದ ಕೆಲವರು ಹೇಳುತ್ತಾರೆ: ಈ ಘಟನೆಗಳಿಂದ ನಮ್ಮ ವಿಶ್ವಾಸ ವರ್ಧಿಸುತ್ತದೆ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ವಲ್ಲದೀನ ಜಾಹದೂ ಫೀನಾ ಲನಹ್‌ದಿಯನ್ನಹುಮ್ ಸುಬುಲನಾ.** ಅಲ್ಲಾಹನ ಸಾಮೀಪ್ಯಕ್ಕೋಸ್ಕರ ಕಠಿಣ ಪರಿಶ್ರಮ ಮಾಡುವವರಿಗೆ ಅಲ್ಲಾಹನು ತನ್ನ ಕಡೆಗಿರುವ ಮಾರ್ಗಗಳನ್ನು ತೆರೆದು ಕೊಡುತ್ತಾನೆ. ಅಲ್ಲಾಹನ ನೈಜ ಧರ್ಮ ಯಾವುದೆಂದು ಅನ್ವೇಷಿಸುತ್ತಾ ಅದರ ಬಗ್ಗೆ ಚಿಂತಿಸಿ ಪ್ರಯತ್ನ ಮಾಡುವವರಿಗೆ ಅಲ್ಲಾಹನು ಮಾರ್ಗದರ್ಶನ ನೀಡುತ್ತಾನೆ. ಅವರ ವಿಶ್ವಾಸ ವರ್ಧಿಸುತ್ತದೆ. ಮತ್ತು ಇನ್ನಷ್ಟು ವರ್ಧಿಸುತ್ತಾ ಇರುತ್ತದೆ. ಕೆಲವರಿಗೆ ಅವರು ಮಾಡಿದ ಒಳಿತುಗಳ ಕಾರಣ ಅಲ್ಲಾಹನು ಅವರಿಗೆ ಅನುಗ್ರಹ ನೀಡುತ್ತಾನೆ ಮತ್ತು ಅವರಿಗೆ ಸನ್ಮಾರ್ಗ ತೋರಿಸುತ್ತಾನೆ. ನಾವು ವಿವರಿಸುವ ಘಟನೆಗಳು ಇಂತಹ ಜನರಿಗೆ ಸಂಬಂಧಿಸಿರುತ್ತವೆ. ಅವರು ಸರಿಯಾದ ಮಾರ್ಗ ಗಳಿಸಲು ಪ್ರಯತ್ನ ಮಾಡುತ್ತಾ ಇದ್ದರು. ಅಂತಹ ಜನರಿಗೆ ಅವರು ಮಾಡಿದ ಯಾವುದೋ ಒಳಿತಿನ ಕಾರಣದಿಂದ ಅಲ್ಲಾಹನು ವಿಶಿಷ್ಟವಾಗಿ ಅನುಗ್ರಹ ನೀಡಿದನು.

ಫ್ರಾನ್ಸ್ ದೇಶದ ಒಬ್ಬ ಮಹಿಳೆ ಆಸಿಯ ಸಾಹಿಬ ಹೇಳುತ್ತಾರೆ: ಒಂದು ದಿನ ನಾನು ಇಂಟರ್‌ನೆಟ್‌ನಲ್ಲಿ ಹೊಸ ಚ್ಯಾನಲ್‌ಗಳನ್ನು ಹುಡುಕುತ್ತಿದ್ದೆ. ನನಗೆ ಅರಬಿ ಚ್ಯಾನಲ್‌ನಲ್ಲಿ ಹವಾರುಲ್ ಮಬಾಶಿರ್ ಲಿಂಕ್ ಲಭಿಸಿತು. ಅದರಲ್ಲಿ ಮಸೀಹರ ಮರಣದ ಬಗ್ಗೆ ವಿವರಣೆ ಜಾರಿಯಲ್ಲಿತ್ತು. ಎಲ್ಲಾ ವಿಧಗಳ ಸಂಶಯಗಳಿಂದ ವಿರಹಿತವಾಗಿ ಸುದೃಢ ಮತ್ತು ಸಭ್ಯ ರೀತಿಯ, ಬಲಿಷ್ಠವಾದ ಮತ್ತು ಅಖಂಡನೀಯವಾದ ಸಾಕ್ಷ್ಯಾಧಾರಗಳನ್ನು ಆಲಿಸಿ ನಾನು ಆಶ್ಚರ್ಯಗೊಂಡೆನು. ಅದರ ಮೊದಲು ನಾನೊಂದು ಸ್ವಪ್ನ ಕಂಡಿದ್ದೆನು. ನಾನು ಅಂಧಕಾರಮಯವಾದ ಒಂದು ಬಾವಿಯೊಳಗೆ ಬೀಳುವಂತೆ ಇದ್ದೇನೆ. ನಾನು ಬಾವಿಯ ತಡೆಗೋಡೆಯನ್ನು ನನ್ನ ಎರಡು ಕೈಗಳಿಂದಲೂ ಬಲವತ್ತಾಗಿ ಹಿಡಿದಿದ್ದೇನೆ. ಆದರೆ ನನ್ನ ಕಾಲುಗಳು ತೂಗಾಡುತ್ತಿವೆ. ನಾನು ಅಚಾನಕವಾಗಿ ಮೇಲೆ ನೋಡಿದಾಗ ಮೂರು ನಾಲ್ಕು ಪಕ್ಷಿಗಳು ಕಾಣಿಸಿದುವು. ಅವುಗಳು ಬಹಳ ಹೆಚ್ಚು ಬೆಳ್ಳಗಾಗಿದ್ದುವು. ಆದರೆ ಅವು ಯಾವ ಪಕ್ಷಿಗಳೆಂದು ನನಗೆ ತಿಳಿಯಲಿಲ್ಲ. ಆ ಪಕ್ಷಿಗಳು ನನ್ನನ್ನು ರಕ್ಷಿಸಲು ಪ್ರಯತ್ನ ಮಾಡುತ್ತಿದ್ದುವು. ಈ ಸ್ವಪ್ನದ ಅರ್ಥವೇನೆಂದು ನನಗೆ ಮೊದಲು ತಿಳಿಯಲಿಲ್ಲ. ಆದರೆ ಅನಂತರ ನನಗೆ ತಿಳಿಯಿತು ಈ ಪಕ್ಷಿಗಳು ಹವಾರ್ ಚ್ಯಾನಲ್‌ನ ವ್ಯಕ್ತಿಗಳೆಂದು. ಅವರು ಪಕ್ಷಿಗಳ ರೂಪದಲ್ಲಿ ನನಗೆ ತೋರಿಸಲ್ಪಟ್ಟರು. ನಾನು ಜಮಾಅತಿನ ಪುಸ್ತಕಗಳನ್ನು ಮತ್ತು ವಿಶಿಷ್ಟವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಅಧ್ಯಯನ ಮಾಡಲು ನಿರ್ಧರಿಸಿದೆನು. ಅವುಗಳಲ್ಲಿ ಇಸ್ಲಾಮಿಗೆ ವಿರುದ್ಧವಾಗಿರುವುದೇನೂ ನಾನು ಕಾಣಲಿಲ್ಲ. ಮುಸ್ಲಿಮರನ್ನೂ, ಇಸ್ಲಾಮನ್ನೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೂ ಶತ್ರುಗಳೆದುರಿಗೆ ಶಕ್ತಿಯುತವಾಗಿ ಪ್ರತಿರೋಧಿಸುವ ಮಹಾ ಪುರುಷನನ್ನಾಗಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡೆನು. ಅವರು ತನ್ನ ಗ್ರಂಥಗಳ ಮೂಲಕ ಇಸ್ಲಾಮಿನ ಶತ್ರುಗಳೆದುರಿಗೆ ಇಸ್ಲಾಮಿನ ವೈಭವವನ್ನು ಪ್ರಕಟಿಸಿದ್ದಾರೆ. ನಾನು ಇಸ್ತಿಖಾರ ಪ್ರಾರ್ಥನೆ ಮಾಡಿದೆ. ಅನಂತರ ನಾನು ಬೈಅತ್ ಮಾಡಿದೆ.

ಒಬ್ಬ ತುರ್ಕಿ ಮಹಿಳೆ ಮೀರಾ ಸಾಹಿಬ ಹೇಳುತ್ತಾರೆ: 2010ರಲ್ಲಿ ನನಗೆ ಅಹ್ಮದಿಯಾ ಜಮಾಅತ್ ಬಗ್ಗೆ ತಿಳಿಯಿತು. ಅದೇ ವರ್ಷ ನಾನು ಬೈಅತ್ ಮಾಡಿದೆ. ನನ್ನ ಪತಿ ಎಂ.ಟಿ.ಎ. ಅರಬಿಯಾ ನೋಡುತ್ತಾ ಇದ್ದರು. ನಾನು ಸಹ ನೋಡಲು ತೊಡಗಿದೆ. ನನ್ನ ಪತಿ ಮನೆಯಲ್ಲಿ ಇಲ್ಲದಾಗ ಸಹ ನಾನು ಅದನ್ನು ನೋಡುತ್ತಿದ್ದೆ. ದಜ್ಜಾಲ್ ಬಗ್ಗೆ ಜಮಾಅತ್ ತಯಾರಿಸಿದ ಫಿಲ್ಮ್ ಸಹ ನೋಡಿದೆ. ವ್ಯಾಖ್ಯಾನ ಬಹಳ ತರ್ಕಬದ್ಧವೂ ವಿವೇಕಭರಿತವೂ ಆಗಿತ್ತು. ಅಂತಹ ವ್ಯಾಖ್ಯಾನ ಮೊದಲು ಎಂದೂ ನಾನು ಆಲಿಸಿರಲಿಲ್ಲ. ನಾನು ನಿರಂತರ ಎಂ.ಟಿ.ಎ. ನೋಡಲು ತೊಡಗಿದೆ. ಹವಾರ್ ಕಾರ್ಯಕ್ರಮ ನೋಡುತ್ತಾ ಇದ್ದೆ. ತಹಜ್ಜುದ್ ನಮಾಝ್

ಮಾಡಲು ಪ್ರಾರಂಭಿಸಿದೆ. ಅನಂತರ ಅಬ್ದುಲ್ ಖಾದಿರ್ ಊರೇ ಸಾಹಿಬರು ನಮ್ಮ ಪ್ರದೇಶಕ್ಕೆ ಆಗಮಿಸಿದಾಗ ನಾನು ಬೈಅತ್ ಮಾಡಿದೆ. ಅನಂತರ ನನ್ನ ಸೊಸೆ ಮತ್ತು ಪುತ್ರಿಯರೂ ಬೈಅತ್ ಮಾಡಿದರು. ನಾವು ಜಮಾಅತ್‌ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪರಸ್ಪರ ವಿಚಾರ ವಿನಿಮಯ ನಡೆಸುತ್ತೇವೆ ಮತ್ತು ಇದುವೇ ನೈಜ ಇಸ್ಲಾಮ್ ಎಂದು ಹೇಳುತ್ತೇವೆ. ನಾನು ಬೈಅತ್ ಮಾಡಿದ ದಿವಸ ರಾತ್ರಿ ಒಂದು ಸ್ವಪ್ನದಲ್ಲಿ ನಾನು ಸೂರತುಲ್ ಕಹಫ್‌ನ ವಚನಗಳನ್ನು ಪಠಿಸುತ್ತಿರುವುದಾಗಿ ಕಂಡೆನು. ಆಗ ನನಗೆ ದೃಢ ವಿಶ್ವಾಸವುಂಟಾಯಿತು, ಅಲ್ಲಾಹನು ನಮ್ಮನ್ನು ದಜ್ಜಾಲನ ಕೆಡುಕುಗಳಿಂದ ರಕ್ಷಿಸುವನು ಎಂದು. ನಾನು ಇಮಾಮ್ ಮಹದಿಯವರ ಸಹಾಯಕಿ ಆಗುವೆನು ಎಂದು. ನಮಗೆ ಸತ್ಯವಿಶ್ವಾಸವನ್ನು ದಯಪಾಲಿಸಿದ್ದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆಗಳು. ನಾನು ನನ್ನ ಹೊಣೆಗಾರಿಕೆಗಳನ್ನು ಈಡೇರಿಸುವವಳಾಗುವಂತೆ ಅಲ್ಲಾಹನು ಮಾಡಲಿ.

ಅಲ್ಲಾಹನು ಹೊಸ ಜಮಾಅತ್‌ಗಳನ್ನು ಹೇಗೆ ಸ್ಥಾಪಿಸುತ್ತಾನೆ ಎಂಬುದರ ಬಗ್ಗೆ ಕೆಲವು ಘಟನೆಗಳಿವೆ. ಬೆನಿನ್ ದೇಶದ ಮುಬಲ್ಲಿಗ್ ಅಬ್ದುಲ್ ಖುದ್ದೂಸ್ ಸಾಹಿಬ್ ಬರೆಯುತ್ತಾರೆ: ಝುಕರಿಯಾ ಎಂಬ ಒಬ್ಬ ಮುಅಲ್ಲಿಮ್ ತಬ್ಲೀಗ್ ಮಾಡಲು ಒಂದು ಗ್ರಾಮಕ್ಕೆ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಹೇಳಿದರು: "ಈಗ ಇಲ್ಲಿನ ಜನರು ಕೆಲಸಕ್ಕೋಸ್ಕರ ಗ್ರಾಮದ ಹೊರಗೆ ಹೋಗಿದ್ದಾರೆ, ನೀವು ಶುಕ್ರವಾರ ಬನ್ನಿರಿ. ಆಗ ಜನರು ಇಲ್ಲಿ ಇರುವರು". ಹಾಗೆ ಶುಕ್ರವಾರ ಮುಅಲ್ಲಿಮ್ ಸಾಹಿಬರು ಆ ಗ್ರಾಮಕ್ಕೆ ಪುನಃ ಹೋದರು. ಮಸ್‌ಜಿದ್‌ಗೆ ಹೋಗಿ ಎರಡು ರಕಅತ್ ನಫ್ಲ್ ನಮಾಝ್ ನಿರ್ವಹಿಸಿದರು. ಅನಂತರ ಮಸ್‌ಜಿದಿನ ಇಮಾಮ್ ಮತ್ತು ಮಸ್‌ಜಿದ್ ಸಮಿತಿಯ ಅನುಮತಿ ಪಡೆದು ತಬ್ಲೀಗ್ ಪ್ರಾರಂಭಿಸಿದರು. ಮುಅಲ್ಲಿಮ್ ಸಾಹಿಬರು ಸೂರತುಲ್ ಫಾತಿಹದ ವ್ಯಾಖ್ಯಾನವನ್ನು ವಿವರಿಸುತ್ತಾ ಇಮಾಮ್ ಮಹ್‌ದಿಯ ಆಗಮನದ ಕುರಿತು ಭಾಷಣ ಮಾಡಿದರು. ಭಾಷಣ ಮಾಡುತ್ತಾ ಇದ್ದಾಗ ಜನರು ಅಲ್ಲಾಹು ಅಕ್‌ಬರ್ ಎಂದು ಘೋಷಿಸುತ್ತಾ ಇದ್ದರು. ಭಾಷಣವನ್ನು ಮುಕ್ತಾಯಗೊಳಿಸಿದಾಗ ಮಸ್‌ಜಿದ್ ಕಮಿಟಿಯ ಅಧ್ಯಕ್ಷರು ಹೇಳಿದರು ನಾನು ಮುಸ್ಲಿಮನಾಗಿ ಜನಿಸಿದ್ದರೂ ಇಂದಿನ ತನಕ ಸೂರತುಲ್ ಫಾತಿಹದ ಇಂತಹ ವ್ಯಾಖ್ಯಾನ ನಾನು ಆಲಿಸಿಲ್ಲ. ಅಹ್ಮದಿಯಾ ಜಮಾಅತಿನ ಉಪದೇಶ ಹೀಗೆಯೇ ಆಗಿದ್ದರೆ ನಿಮಗೆ ನಾನು ಶುಭಾಶಯ ಅರ್ಪಿಸುತ್ತೇನೆ. ನಾವು ಈ ಜಮಾಅತನ್ನು ಸ್ವೀಕರಿಸುತ್ತೇವೆ. ಅನಂತರ ಇಮಾಮ್ ಸಮೇತ ಆ ಗ್ರಾಮದ ಎಲ್ಲಾ ಮುಸ್ಲಿಮರು ಅಹ್ಮದಿಯ್ಯತ್ ಸ್ವೀಕರಿಸಿದರು. ಈ ರೀತಿ ಅಲ್ಲಿ ಒಂದು ಹೊಸ ಜಮಾಅತ್ ಸ್ಥಾಪಿತವಾಯಿತು.

ಹೊಸ ಜಮಾಅತ್ ಸ್ಥಾಪನೆಯಾದ ಇನ್ನೊಂದು ಘಟನೆ ಅರೂಶಾ ರೀಜನ್‌ಗೆ ಸಂಬಂಧಿಸಿದ್ದಾಗಿದೆ. ಮುರಬ್ಬಿ ಸಾಹಿಬರು ಬರೆಯುತ್ತಾರೆ: ಅಲ್ಲಾಹನ ಅನುಗ್ರಹದಿಂದ ಹೊಸದಾದ ಒಂದು ಪ್ರದೇಶದಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿದೆ. ಸಾಮೆ ಜಿಲ್ಲೆಯ ಕಸ್‌ವಾನಿ ಎಂಬ ಗ್ರಾಮದಲ್ಲಿ ಇದರ ಮೊದಲು ಯಾವ ಅಹ್ಮದಿಯೂ ಇರಲಿಲ್ಲ. ಈ ಗ್ರಾಮಕ್ಕೆ ಪದೇ ಪದೇ ಹೋಗಿ ಅಹ್ಮದಿಯಾ ಸಾಹಿತ್ಯ ವಿತರಣೆ ಮಾಡಲಾಯಿತು. ಜಮಾಅತಿನ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಈ ಗ್ರಾಮದಲ್ಲಿ ವಿತರಣೆ ಮಾಡಲಾಯಿತು. ಅದರ ಪರಿಣಾಮವಾಗಿ ಜನರು ಬೈಅತ್ ಮಾಡಲು ಪ್ರಾರಂಭಿಸಿದರು ಮತ್ತು ಕ್ರಮಬದ್ಧವಾದ ಜಮಾಅತ್ ಸಹ ಈಗ ಅಲ್ಲಿ ಸ್ಥಾಪಿತವಾಗಿದೆ. ಇಲ್ಲಿ ಒಂದು ಮಸ್‌ಜಿದ್ ನಿರ್ಮಿಸಲಿಕ್ಕೋಸ್ಕರ ನಿವೇಶನ ಸಹ ಖರೀದಿಸಲಾಗುತ್ತಿದೆ. ಇಲ್ಲಿ ಸ್ಥಳೀಯ ಅಹ್ಮದಿಯರು ಮಸ್‌ಜಿದ್‌ಗೋಸ್ಕರ ಸ್ವತಃ ಇಟ್ಟಿಗೆಗಳನ್ನು ತಯಾರಿಸುತ್ತಿದ್ದಾರೆ. ಆದರೆ ಅದರೊಂದಿಗೆ ಇತರ ಮುಸ್ಲಿಮರಿಂದ ವಿರೋಧ ಸಹ ಪ್ರಾರಂಭವಾಗಿದೆ. ವಿರೋಧಿಗಳು ಜಮಾಅತಿನ ವಿರುದ್ಧ ಅಪಪ್ರಚಾರ ಮಾಡಲು ಮತ್ತು ಅವಿವೇಕದಿಂದ ವರ್ತಿಸಲು ಪ್ರಾರಂಭಿಸಿದ್ದಾರೆ. ನಮ್ಮ ಮುರಬ್ಬಿ ಹೇಳುತ್ತಾರೆ: ನಾವು ಅಧಿಕಾರಿಗಳಿಂದ ಅನುಮತಿ ಪಡೆದು ಗ್ರಾಮದಲ್ಲಿ ಒಂದು ವಾದ ಪ್ರತಿವಾದದ ವ್ಯವಸ್ಥೆ ಮಾಡಿದೆವು. ಗ್ರಾಮದಲ್ಲಿ ಹೀಗೆ ಪ್ರಚಾರ ಮಾಡಲಾಯಿತು: ಸುನ್ನಿ ಮೌಲವಿಗಳು ತಾವು ಹೇಳುವುದು ಸತ್ಯವೆಂದು ಹೇಳುವುದಾದರೆ ಅವರು ಬಂದು ಜನರ ಮುಂದೆ ಹೇಳಲಿ ಎಂದು ಅಹ್ವಾನ ನೀಡಲಾಯಿತು. ನಿಗದಿತ ಕಾರ್ಯಕ್ರಮ ಪ್ರಕಾರ ವಾದ ಪ್ರತಿವಾದದ ವ್ಯವಸ್ಥೆ ಮಾಡಲಾಯಿತು. ಅನೇಕ ಅಹ್ಮದಿಯೇತರ ಮುಸ್ಲಿಮರು ಅಲ್ಲಿಗೆ ಆಗಮಿಸಿದರು. ಆದರೆ ಯಾವ ಸುನ್ನೀ ಮೌಲವಿಯೂ ಬರಲಿಲ್ಲ. ಆಗ ಗ್ರಾಮದ ಜನರಿಗೆ ತಿಳಿಯಿತು ಮೌಲವಿಗಳು ಅಪಪ್ರಚಾರ ಮಾಡುತ್ತಾರೆಯೇ ಹೊರತು ಅವರಲ್ಲಿ ಬೇರೆ ಏನೂ ಇಲ್ಲ.

ಬುರ್ಕಿನೋಫಾಸೋದ ಅಮೀರ್ ಸಾಹಿಬ್ ಬರೆಯುತ್ತಾರೆ: ನಾಬೀರ್ ಎಂಬ ಗ್ರಾಮದಲ್ಲಿ ತಬ್ಲೀಗ್ ಮಾಡಲಾಯಿತು. ಅಲ್ಲಿ ಅಲ್ಲಾಹನ ಅನುಗ್ರಹದಿಂದ ಹಲವರು ಬೈಅತ್ ಮಾಡಿದರು. ಅಲ್ಲಿ ಒಂದು ಅಪೂರ್ಣವಾದ ಮಸ್‌ಜಿದ್‌ನಲ್ಲಿ ನಮ್ಮ ಒಬ್ಬ ಮುಅಲ್ಲಿಮರನ್ನು ನೇಮಿಸಲಾಯಿತು. ಅಲ್ಲಿ ಜುಮುಅ ಪ್ರಾರಂಭಿಸಲಾಯಿತು. ಆದರೆ ಅಹ್ಮದಿಯೇತರ ಮೌಲವಿ ಅಲ್ಲಿ ಕಲಹ ಪ್ರಾರಂಭಿಸಿದರು. ಜುಮುಅ ನಮಾಝ್ ಸಮಯದಲ್ಲಿ ಮಸ್‌ಜಿದ್‌ಗೆ ಬಂದು ಜನರನ್ನು ಉತ್ತೇಜಿಸಿ ಅವರು ಅಹ್ಮದಿಯ್ಯತ್ ಬಿಡಲು ಪ್ರಯತ್ನ ಮಾಡುತ್ತಿದ್ದರು. ಆದರೂ ಜಮಾಅತ್ ವರ್ಧಿಸುತ್ತಾ ಇತ್ತು. ಮೌಲವಿಗೆ ಏನೂ ಮಾಡಲಾಗಲಿಲ್ಲ. ಆಗ ಆ ಮೌಲವಿ ಅಹ್ಮದಿಯರ ಮಸ್‌ಜಿದಿನ ಎದುರಿಗೆ ತನ್ನ ಒಂದು ಮಸ್‌ಜಿದ್ ನಿರ್ಮಿಸಿದರು. ಅಹ್ಮದಿಯಾ ಮಸ್‌ಜಿದ್ ಕೇವಲ ನಮಾಝಿನ ಚಾಪೆಗಳನ್ನು ಇರಿಸುವ ಸ್ಟೋರ್ ಆಗುವುದು ಎಂದೂ ಅಲ್ಲಿ ನಮಾಝ್ ಮಾಡುವವರು ಯಾರೂ ಬರಲಾರರು ಎಂದೂ ಹೇಳಿದರು. ಆದರೆ ಸಂಭವಿಸಿದ್ದು ತದ್ವಿರುದ್ಧ. ಆ ಮೌಲವಿಯ ಸಂಬಂಧಿಕರು ಮಾತ್ರ ಅಲ್ಲಿ ನಮಾಝ್ ಮಾಡುತ್ತಾರೆ. ನಮ್ಮ ಮಸ್‌ಜಿದ್‌ನಲ್ಲಿ ನಮಾಝ್ ಮಾಡುವವರ ಸಂಖ್ಯೆ ಹೆಚ್ಚಾಗುತ್ತಾ ಇದೆ. ಈಗ ಜುಮುಅ ದಿವಸ ಈ ಚಿಕ್ಕ ಗ್ರಾಮದಲ್ಲಿ ಇನ್ನೂರರಿಂದ ಇನ್ನೂರೈವತ್ತು ತನಕ ಜನರು ಜುಮುಅ ನಮಾಝಿಗೆ ಬರುತ್ತಿದ್ದಾರೆ.

ಅಲ್ಲಾಹನು ಪ್ರಾರ್ಥನೆ ಅಂಗೀಕರಿಸುವ ದೃಶ್ಯಗಳನ್ನು ಹೇಗೆ ತೋರಿಸುತ್ತಾನೆ ಎಂಬುದರ ಬಗ್ಗೆ ಬೆನಿನ್ ದೇಶದ ಮುಬಲ್ಲಿಗ್ ಅನ್‌ಸರ್ ಸಾಹಿಬ್ ಬರೆಯುತ್ತಾರೆ: ಆಸಿವ್

ಎಂಬ ಗ್ರಾಮದಲ್ಲಿ ಇನ್ನೂರು ಜನರು ಬೈಅತ್ ಮಾಡಿದ್ದರು. ಈ ಗ್ರಾಮದಲ್ಲಿ ಪ್ರತಿ ಶುಕ್ರವಾರ ಮತ್ತು ಮಂಗಳವಾರ ತರಬೇತಿ ಕ್ಲಾಸುಗಳು ಜರಗುತ್ತಿವೆ. ಅಲ್ಲಿನ ಸದರ್ ಸಾಹಿಬರ ಮಗಳು ಬೇರೆ ಒಂದು ಗ್ರಾಮದಲ್ಲಿ ವಾಸಿಸುತ್ತಿದ್ದಳು. ಅವಳು ಕಠಿಣವಾಗಿ ರೋಗಬಾಧಿತೆಯಾದಳು. ರೋಗದ ಕಾರಣ ಅವಳ ಶರೀರ ಚೇತನ ರಹಿತವಾಗಿತ್ತು. ಅವಳು ಮಾತಾಡುತ್ತಿರಲಿಲ್ಲ ಮತ್ತು ಶರೀರ ನಿಶ್ಚಲವಾಗಿತ್ತು. ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ರೋಗ ನಿವಾರಣೆಯಾಗಲಿಲ್ಲ. ನಿರಾಶೆಗೊಂಡು ಮನೆಗೆ ತರಲಾಯಿತು. ಅನಂತರ ಒಬ್ಬ ಮೌಲವಿಯನ್ನು ಕರೆದು ತಂದರು. ಆ ಮೌಲವಿ ಓದಿ ಊದಿದ ಪ್ರತಿಫಲವಾಗಿ ನಲ್ವತ್ತು ಸಾವಿರ ಫ್ರಾಂಕ್ ಮತ್ತು ಒಂದು ಕುರಿಯನ್ನು ತೆಗೆದುಕೊಂಡನು. ಆದರೆ ರೋಗಿಗೆ ಗುಣವಾಗಲಿಲ್ಲ. ಅನಂತರ ಇನ್ನೊಬ್ಬ ಮೌಲವಿಯನ್ನು ಕರೆತಂದರು. ಆ ಮೌಲವಿ ಸಹ ಮೊದಲಿನ ಮೌಲವಿಯ ಹಾಗೆ ಹಣ ಪಡೆದರೂ ಏನೂ ಪ್ರಯೋಜನವಾಗಲಿಲ್ಲ. ಅವರು ಮೌಲವಿಗಳ ಬಗ್ಗೆ ನಿರಾಶರಾದರು. ಆ ಹುಡುಗಿ ಮೃತಳಾಗುವಳು ಎಂದು ಭಾವಿಸಿ ಅವಳನ್ನು ಅವಳ ತಂದೆಯ ಮನೆಯಲ್ಲಿ ಬಿಟ್ಟು ಬಿಡೋಣವೆಂದು ತೀರ್ಮಾನಿಸಿದರು. ಹಾಗೆ ಹುಡುಗಿಯನ್ನು ಇಲ್ಲಿಗೆ ಕರೆದುಕೊಂಡು ಬಂದಾಗ ಆ ಹುಡುಗಿಯ ತಂದೆ ಹುಡುಗಿಗೋಸ್ಕರ ಪ್ರಾರ್ಥಿಸಲು ಜಮಾಅತಿನವರೊಂದಿಗೆ ಅಪೇಕ್ಷಿಸಿದರು. ನನಗೆ ಸಹ ಪತ್ರ ಬರೆದರು. ಒಂದು ದಿವಸದೊಳಗೆ ಹುಡುಗಿ ನವಚೇತನ ಪಡೆದಳು. ಮುಂದಿನ ದಿನ ಸಾಯಂಕಾಲದೊಳಗೆ ರೋಗ ಅವಳ ಶರೀರದಿಂದ ಪೂರ್ಣವಾಗಿ ಹೊರಟು ಹೋಯಿತು. ಆ ಹುಡುಗಿ ಬದುಕುವಳು ಎಂದು ಯಾರೂ ಯೋಚಿಸುತ್ತಿರಲಿಲ್ಲ. ಆದರೆ ಈಗ ಅವಳನ್ನು ಕಂಡು ಅವಳು ರೋಗಿಯಾಗಿದ್ದಳು ಎಂದು ಯಾರೂ ಹೇಳಲಾರರು. ಇದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಒಂದು ಸಾಕ್ಷ್ಯಾಧಾರವಾಗಿದೆ.

ಹಿಂದೂಸ್ಥಾನದ ನಾಯಿಬ್ ನಾಝಿರ್ ದಅ್‌ವತ್ ಇಲಲ್ಲಾಹ್ ಬರೆಯುತ್ತಾರೆ: ಲಕ್ಕಿಂಪುರ್ ಪಟ್ಟಣದಲ್ಲಿ ಅಬ್ದುಸ್ಸತ್ತಾರ್ ಎಂಬವರೊಂದಿಗೆ ಜಮಾಅತಿನ ಸಂಬಂಧ ಪುನಃ ಸ್ಥಾಪಿತವಾಯಿತು. ಅವರನ್ನು ಭೇಟಿಯಾದಾಗ ಅವರು ಬಿಕ್ಕಳಿಸಿ ಅಳಲು ತೊಡಗಿದರು. ಅವರು ಹೇಳಿದರು ನಾವು ಕಿರಣ್‌ಪುರ ಗ್ರಾಮದಲ್ಲಿ ವಾಸಿಸುತ್ತಿದ್ದೆವು. ನಮಗೆ ಐವತ್ತು ಭಿಗೆ ಜಮೀನು ಇತ್ತು. ಒಳ್ಳೆಯ ವ್ಯಾಪಾರವಿತ್ತು. ನಾವು ಹನ್ನೆರಡು ವರ್ಷಗಳ ಹಿಂದೆ ಬೈಅತ್ ಮಾಡಿ ಜಮಾಅತ್‌ಗೆ ಸೇರಿದ್ದೆವು. ಆದರೆ ಬೈಅತ್ ಮಾಡಿದ ನಂತರ ವಿರೋಧಿಗಳು ನಮ್ಮ ಮನೆಗೆ ಕಲ್ಲೆಸೆಯುತ್ತಿದ್ದರು. ನಾವು ಮನೆಬಿಟ್ಟು ಹೋಗುವಂತೆ ಮಾಡಿದರು. ನನ್ನ ಮಗನನ್ನು ಹೊಡೆದು ಗಾಯಗೊಳಿಸಿದರು. ನನ್ನ ಪತ್ನಿಯ ಕೈ ಮುರಿದು ಹಾಕಿದರು. ನಮ್ಮನ್ನು ಎಷ್ಟು ವಿರೋಧಿಸಿದರೆಂದರೆ ನಾವು ನಮ್ಮ ಜಮೀನನ್ನು ಚಿಕ್ಕಾಸಿಗೆ ಭಿಕ್ರಿಮಾಡಿ ಆ ಗ್ರಾಮದಿಂದ ಹೊರಡಬೇಕಾಯಿತು. ನಮ್ಮ ವ್ಯಾಪಾರ ನಾಶವಾಯಿತು. ನಾವು ಲಕ್ಕಿಂಪುರ ಪಟ್ಟಣಕ್ಕೆ ಬಂದು ಒಂದು ಚಿಕ್ಕ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದೆವು. ಆದರೆ ವಿರೋಧಿಗಳು ಇಲ್ಲಿಗೆ ಸಹ ನಮ್ಮನ್ನು ಹಿಂಬಾಲಿಸಿದರು. ಈ ಪಟ್ಟಣದ ಮುಸ್ಲಿಮರು ನಮ್ಮನ್ನು ದ್ವೇಷಿಸುವಂತೆ ಮಾಡಿದರು. ಯಾವ ಮುಸ್ಲಿಮನೂ ನಮ್ಮೊಂದಿಗೆ ಮಾತನಾಡುತ್ತಿರಲಿಲ್ಲ. ನಮಗೆ ಅವರು ತೊಂದರೆ ಕೊಡುತ್ತಾ ಇದ್ದರು. ಇದರ ಮಧ್ಯೆ ಜಮಾಅತ್‌ನೊಂದಿಗೆ ನಮ್ಮ ಸಂಪರ್ಕ ಸಹ ಕಡಿದು ಹೋಯಿತು. ಆದರೆ ಅಲ್ಲಾಹನು ನಮಗೆ ಅಹ್ಮದಿಯಾ ಜಮಾಅತಿನ ಸತ್ಯತೆ ಬಗ್ಗೆ ಒಂದು ವೈಭವಶಾಲಿ ದೃಷ್ಟಾಂತ ತೋರಿಸಿದನು. ನಮ್ಮನ್ನು ಹೆಚ್ಚಾಗಿ ವಿರೋಧಿಸುತ್ತಿದ್ದ ವಿರೋಧಿಗಳ ಒಂದು ಗುಂಪು ಒಂದು ಬಸ್‌ನಲ್ಲಿ ಯಾವುದೋ ವಿವಾಹದಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ ಅವರ ಬಸ್ ರೈಲು ಹಳಿಗಳ ಮಧ್ಯೆ ಸಿಲುಕಿತು. ಆಗ ಟ್ರೈನ್ ಡಿಕ್ಕಿಹೊಡೆದು ದಾಟಿ ಹೋಯಿತು. ಆಗ 28 ಜನರು ಮೃತರಾದರು. ಬದುಕಿ ಉಳಿದವರು ತೀವ್ರವಾಗಿ ಗಾಯಗೊಂಡಿದ್ದರು. ಸತ್ತವರ ಮೃತಶರೀರಗಳು ಗುರುತಿಸಲಾಗದಷ್ಟು ತುಂಡು ತುಂಡುಗಳಾಗಿ ಹರಡಿತ್ತು. ವಿರೋಧಿಗಳ ಒಂದೊಂದು ಮನೆಯಿಂದ ಒಂಭತ್ತರಂತೆ ಶವಗಳನ್ನು ಸಂಸ್ಕಾರಕ್ಕಾಗಿ ಹೊರಡಿಸಲಾಗಿತ್ತು. ನಮಗೆ ಈ ಘಟನೆ ಬಗ್ಗೆ ತಿಳಿದಾಗ ಗಾಯಗೊಂಡವರನ್ನು ಕಾಣಲು ಆಸ್ಪತ್ರೆಗೆ ಹೋಗಿದ್ದೆವು. ಆಗ ಅವರ ಸಂಬಂಧಿಕರು ನಾಚಿಕೆಯಿಂದ ನಮಗೆ ಮುಖತೋರಿಸದೆ ಮರೆಮಾಡಲು ತೊಡಗಿದರು. ಈ ಘಟನೆಯ ನಂತರ ಲಕ್ಕಿಂಪುರ್ ಪಟ್ಟಣದ ದೊಡ್ಡ ಮಸ್‌ಜಿದಿನ ಒಬ್ಬ ಮೌಲವಿ ಗ್ರಾಮದಲ್ಲಿ ಬಾಕಿ ಉಳಿದಿದ್ದ ವಿರೋಧಿಗಳನ್ನೂ ಅಬ್ದುಸತ್ತಾರ್‌ರವರ ಕುಟುಂಬವನ್ನೂ ಕರೆದು ಹೇಳಿದರು: ನೀವು ಈ ಅಹ್ಮದಿಯರೊಂದಿಗೆ ಕ್ಷಮೆ ಯಾಚಿಸಿರಿ. ವಿರೋಧವನ್ನು ಬಿಡಿರಿ. ಸಂಬಂಧ ವಿಚ್ಛೇದನೆಯನ್ನು ಕೊನೆಗೊಳಿಸಿರಿ ಎಂದು ಹೇಳಿದರು. ಈ ದುರ್ಘಟನೆಯ ನಂತರ ವಿರೋಧ ಸಂಪೂರ್ಣವಾಗಿ ತಣ್ಣಗಾಗಿದೆ. ನಮ್ಮ ಸಂಬಂಧ ಜಮಾಅತಿನೊಂದಿಗೆ ಕಡಿದು ಹೋಗಿದ್ದರೂ ನಾವು ಅಹ್ಮದಿಯರಾಗಿಯೇ ಇದ್ದೆವು. ಹೊಸದಾಗಿ ಜಮಾಅತ್‌ನೊಂದಿಗೆ ಸಂಬಂಧ ಸ್ಥಾಪಿಸಿದುದರಿಂದ ಸಂತೋಷಗೊಂಡ ಅವರೆಲ್ಲರೂ ಬೈಅತನ್ನು ನವೀಕರಿಸಿದರು. ಒಮ್ಮೆ ಅಹ್ಮದಿಯಾದವರು ಅಹ್ಮದಿಯ್ಯತ್ ಸತ್ಯವೆಂದು ಜಮಾಅತಿಗೆ ಸೇರಿದ್ದರೆ ಅಲ್ಲಾಹನು ಅವರ ವಿಶ್ವಾಸವನ್ನು ಬಲಪಡಿಸುತ್ತಾನೆ.

ವಿರೋಧಿಗಳ ದೌರ್ಜನ್ಯ ಸಹಿಸಿ ತಮ್ಮ ವಿಶ್ವಾಸವನ್ನು ಸಂರಕ್ಷಿಸಿದ ಇನ್ನೊಂದು ಘಟನೆ ಉತ್ತರ ಪ್ರದೇಶದ ಒಂದು ಗ್ರಾಮಕ್ಕೆ ಸಂಬಂಧಿಸಿದೆ. ಅಲ್ಲಿ ಒಂದು ಗ್ರಾಮದಲ್ಲಿ ಎಲ್ಲರೂ ಬೈಅತ್ ಮಾಡಿದ್ದರೂ ಅನಂತರ ವಿರೋಧಗಳ ಕಾರಣ ಎಲ್ಲರೂ ಹಿಂದೆ ಸರಿದಿದ್ದರು. ಆದರೆ ಆ ಗ್ರಾಮದ ಮುಹಮ್ಮದ್ ಹನೀಫ್ ಸಾಹಿಬರು ಅಹ್ಮದಿಯ್ಯತ್‌ನಲ್ಲಿ ನೆಲೆ ನಿಂತಿದ್ದರು. ಅಲ್ಲಿನ ಜನರು ಬಹಳ ವಿರೋಧಿಸುತ್ತಾ ಇದ್ದರೂ ಅವರು ತಮ್ಮ ವಿಶ್ವಾಸವನ್ನು ಸಂರಕ್ಷಿಸಿದ್ದರು. ಆ ಮಧ್ಯೆ ಹನೀಫ್ ಸಾಹಿಬರ ಒಬ್ಬ ಪುತ್ರ ಮೃತನಾದನು. ಅವನ ಮೃತದೇಹ ಖಬರಸ್ಥಾನದಲ್ಲಿ ದಫನು ಮಾಡಲು ಮತ್ತು ಜನಾಝು ನಮಾಝು ನಿರ್ವಹಿಸಲು ವಿರೋಧಿಗಳು ಬಿಡಲಿಲ್ಲ. ಅವರು ಹನೀಫ್ ಸಾಹಿಬರೊಂದಿಗೆ ಹೇಳಿದರು: ನೀವು ಅಹ್ಮದಿಯತ್ತನ್ನು ತ್ಯಜಿಸಿ ತೌಬ ಮಾಡುವುದಾದರೆ ಮೃತ ಶರೀರ ಖಬರಸ್ಥಾನದಲ್ಲಿ ದಫನು ಮಾಡಲು ಅನುಮತಿ

ನೀಡುವೆವು ಮತ್ತು ನಮಾಝ್ ಜನಾಝ ನಿರ್ವಹಿಸುವೆವು ಎಂದು. ಆದರೆ ಹನೀಫ್ ಸಾಹಿಬ್ ಅವರ ಮಾತನ್ನು ಅಂಗೀಕರಿಸಲಿಲ್ಲ. ಅವರು ತನ್ನ ಮಕ್ಕಳೊಂದಿಗೆ ನಮಾಝೆ ಜನಾಝ ನಿರ್ವಹಿಸಿ ತಮ್ಮ ಸ್ಥಳದಲ್ಲಿಯೇ ದಫನ್ ಮಾಡಿದರು. ಹನೀಫ್ ಸಾಹಿಬರೊಂದಿಗೆ ಜಮಾಅತ್ ಸಂಪರ್ಕವನ್ನು ಪುನಃ ಸ್ಥಾಪಿಸಿದಾಗ ಅವರು ಅಳುತ್ತಾ ತಮ್ಮ ಕುಟುಂಬ ಸಮೇತ ಬೈಅತ್ ನವೀಕರಿಸಿದರು. ನೀವು ಕೇಂದ್ರದೊಂದಿಗೆ ಏಕೆ ಸಂಬಂಧ ಸ್ಥಾಪಿಸಲಿಲ್ಲ ಎಂದು ಅವರೊಂದಿಗೆ ವಿಚಾರಿಸಿದಾಗ ಅವರು ಹೇಳಿದರು: ಲಕ್ನೋದಲ್ಲಿದ್ದ ಖಾದಿಯಾನಿಗಳ ಕೇಂದ್ರ ನಾಶವಾಗಿದೆ ಅವರ ಮದರಸ ಸಹ ಮುಚ್ಚಲಾಗಿದೆ ಎಂದು ನಮಗೆ ತಿಳಿಸಲಾಗಿತ್ತು. ನಮಗೆ ಖಾದಿಯಾನ್‌ನೊಂದಿಗೆ ಸಂಪರ್ಕವಿರಲಿಲ್ಲ ಎಂದು ಹೇಳಿದರು. ಇಂತಹ ಸ್ಥಿತಿಯಲ್ಲಿಯೂ ಹನೀಫ್ ಸಾಹಿಬರು ದೃಢ ವಿಶ್ವಾಸಿಯಾಗಿದ್ದರು. ಅವರಿಗೆ ಅಲ್ಲಾಹನು ಹಿದಾಯತ್ ನೀಡಿದುದರಿಂದ ಅವರು ಅದರಲ್ಲಿ ಸ್ಥಿರವಾಗಿ ನೆಲೆನಿಂತರು. ಆದರೆ ಸ್ವಾರ್ಥ ಉದ್ದೇಶದಿಂದ ಬೈಅತ್ ಮಾಡಿದವರು ಜಮಾಅತ್ ತ್ಯಜಿಸಿ ಹೋದರು.

ಬೈಅತ್ ಮಾಡಿದ ನಂತರ ಅಸಾಧಾರಣ ಬದಲಾವಣೆ ಸಹ ಜನರಲ್ಲಿ ಸಂಭವಿಸುತ್ತದೆ. ಉಝ್ಬೆಕಿಸ್ಥಾನದಲ್ಲಿ ಹೊಸದಾಗಿ ಬೈಅತ್ ಮಾಡಿದ ಝುಹೀರ್ ವಾಹಿದ್ ಸಾಹಿಬ್ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸೂರತುಲ್ ಫಾತಿಹಕ್ಕೆ ನೀಡಿದ ವ್ಯಾಖ್ಯಾನವನ್ನು ಅರಿತುಕೊಂಡ ನಂತರ ನಾನು ನಮಾಝ್ ಮಾಡುವ ರೀತಿ ಪೂರ್ಣವಾಗಿ ಬದಲಾವಣೆ ಗೊಂಡಿತು. ನನಗೆ ನಮಾಝ್‌ನಲ್ಲಿ ಏನೆಲ್ಲ ದೊರಕುತ್ತಿದೆಯೋ ಅದು ಹಿಂದೆ ದೊರಕುತ್ತಿರಲಿಲ್ಲ. ಇಹ್ಸಾನ್ ಬಗ್ಗೆ ವಿವರಿಸಿದ ಹದೀಸಿನಿಂದ ನನಗೆ ಬಹಳ ಪ್ರಯೋಜನ ಲಭಿಸಿದೆ.

ಬೊಲೀವಿಯದ ಮುಬಲ್ಲಿಗ್ ಗಾಲಿಬ್ ಸಾಹಿಬ್ ಬರೆಯುತ್ತಾರೆ: ವಿಲಿಯಮ್ ಶಾಹೀನ್ ಕ್ರೈಸ್ತ ಧರ್ಮದ ಯಹೋವನ ಸಾಕ್ಷಿಗಳು ಎಂಬ ಪಂಗಡದ ಪಾದ್ರಿಯಾಗಿದ್ದರು. ಅವರು ಲೆಬನಾನ್ ದೇಶದವರೂ ಜನ್ಮತಃ ಕ್ರೈಸ್ತರೂ ಆಗಿದ್ದರು. ಕಳೆದ ಮೂರು ವರ್ಷಗಳಿಂದ ಅವರು ಬೊಲೀವಿಯಾದಲ್ಲಿದ್ದಾರೆ. ಈ ಪಂಗಡದ ಬಗ್ಗೆ ಮಾಹಿತಿ ಗಳಿಸಲು ಅವರನ್ನು ಭೇಟಿಯಾಗಲು ಸಮಯ ನಿಗದಿಪಡಿಸಲಾಗಿತ್ತು. ಅವರನ್ನು ಪ್ರಥಮ ಸಾರಿ ಭೇಟಿಯಾದಾಗ ಅವರು ತಮ್ಮ ಪಂಗಡದ ಬಗ್ಗೆ ವಿವರಣೆ ನೀಡುವುದಕ್ಕೆ ಬದಲಾಗಿ ನನ್ನೊಂದಿಗೆ ಇಸ್ಲಾಮ್ ಮತ್ತು ಅಹ್ಮದಿಯ್ಯತ್ ಬಗ್ಗೆ ಪ್ರಶ್ನೆ ಕೇಳಲು ತೊಡಗಿದರು. ನಾನು ಅವರೊಂದಿಗೆ ಜಮಾಅತ್ ಬಗ್ಗೆ ಮತ್ತು ವಿಶಿಷ್ಟವಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಬಗ್ಗೆ ಸವಿಸ್ತಾರವಾಗಿ ಮಾತನಾಡಿದೆ. ನಾನು ಅವರನ್ನು ಜುಮುಅ ನಮಾಝ್‌ಗೆ ಕರೆದಾಗ ಅವರು ಬರಲು ಪ್ರಾರಂಭಿಸಿದರು. ಜುಮುಅದ ನಂತರ ಪ್ರತಿ ಶುಕ್ರವಾರ ಅವರೊಂದಿಗೆ ಮಾತುಕತೆ ನಡೆಸಲಾಗುತ್ತಿತ್ತು. ವಿಲಿಯಮ್ ಸಾಹಿಬರಿಗೆ ಚಿಂತೆ ಇತ್ತು – ತಾನು ಅಹ್ಮದಿಯಾ ಜಮಾಅತಿಗೆ ಸೇರಿದರೆ ತಂದೆ ತಾಯಂದಿರು ಮತ್ತು ಚರ್ಚ್‌ನವರು ವಿರೋಧಿಸುವರೆಂದು. ಹೊಸ ನೌಕರಿ ಹುಡುಕುವ ಬಗ್ಗೆ ಸಹ ಚಿಂತೆ ಇತ್ತು. ಅದೇ ವೇಳೆ ಅವರು ಸತ್ಯಾನ್ವೇಷಣೆಗೂ ಮಹತ್ವ ನೀಡುತ್ತಿದ್ದರು. ಅವರಿಗೆ ಅರಬಿ ಭಾಷೆ ತಿಳಿದಿತ್ತು. ಅವರು ವೆಬ್‌ಸೈಟ್‌ನಲ್ಲಿ ಜಮಾಅತಿನ ಅರಬಿ ಪುಸ್ತಕಗಳನ್ನು ಅಧ್ಯಯನ ಮಾಡಲು ತೊಡಗಿದರು. ಅವರು ಹೇಳಿದರು: ನಾನು ಬಹಳ ಸಮಯದಿಂದ ಸತ್ಯವನ್ನು ಹುಡುಕುತ್ತಿದ್ದೆ. ಈಗ ಸತ್ಯ ಲಭಿಸಿವೆ. ಹಾಗೆ ಅವರು ವಿರೋಧವನ್ನು ಮತ್ತು ನೌಕರಿಯನ್ನು ನಿರ್ಲಕ್ಷಿಸಿ ಒಂದು ದಿನ ಜುಮುಅದ ನಂತರ ಬೈಅತ್ ಮಾಡಿ ಜಮಾಅತಿಗೆ ಸೇರಿದರು.

(ಹುಝೂರ್ ಇನ್ನೂ ಕೆಲವು ಘಟನೆಗಳನ್ನು ವಿವರಿಸಿದ ನಂತರ ಹೇಳಿದರು) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಲೋಕಕ್ಕೆ ತಲಪಿಸಬೇಕೆಂದು ನಮ್ಮೊಂದಿಗೆ ಅಲ್ಲಾಹನು ಹೇಳಿದ ಸಂದೇಶವನ್ನು ಸರಿಯಾದ ರೀತಿಯಲ್ಲಿ ತಲಪಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 06-10-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team, Karnataka for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon